ಪುನಃ 'ಚಿತ್ರಕೂಟ'ದಲ್ಲಿ ಸ್ನೇಹಿತರ ಭೇಟಿ. ಈ ಬಾರಿ ತೇಜಸ್ವಿಯವರಿಗ ಬೆನ್ನಿನಲ್ಲಿ ಕುರು! ಅಸಾಧ್ಯ ನೋವು, ತುಡಿತ! ಆಗ ಶ್ರೀರಾಮ್ ತೋಟದಿಂದ ಜನ್ನಾಪುರ ಎಂಬಲ್ಲಿಗೆ ನಡೆದುಕೊಂಡು ಬಂದು, ಗುರುತಿದ್ದ ಅಂಗಡಿಯಿಂದ ಗೋಣಿಬೀಡಿನ ಡಾಕ್ಟರ್‌ಗೆ ವಿಷಯ ತಿಳಿಸಿದರು. ತೋಟಕ್ಕೆ ಬಂದ ಡಾಕ್ಟರು ತೇಜಸ್ವಿಯವರ ಕುರುವಿನಲ್ಲಿದ್ದ ಕೀವನ್ನು ತೆಗೆಯಲು ನಿರ್ಧರಿಸಿ, ಸಿರಂಜ್‌ನಿಂದ ಕೀವು ತೆಗೆಯಲು ಪ್ರಾರಂಭಿಸಿದಾಗ ತೇಜಸ್ವಿ ನೋವಿನಿಂದ ಕೂಗಿಕೊಂಡರೆ ಶ್ರೀರಾಮ್ ನಗುತ್ತ, 'ಇದು ಲಾಕ್ಷ ಗೇಹ ದಾಹಕ್ಕೆ' ಎನ್ನುತ್ತಿದ್ದಂತೆ ತೇಜಸ್ವಿ ಇನ್ನೊಮ್ಮೆ, 'ಹಾಂ' ಎಂದರು. ಆಗ ಶ್ರೀರಾಮ್, 'ಇದು ವಿಷಮ ವಿಷಾನ್ನಕ್ಕೆ' ಎಂದು ಅಂದಾಗ ತೇಜಸ್ವಿ, 'ಸೇಡು ತೀರಿಸಿಕೊಳ್ಳುತ್ತಿದ್ದೀರೇನ್ರಿ?' ಎಂದು ರೇಗಿದರು. ಆಗ ಶ್ರೀರಾಮ್, 'ಇಲ್ಲಾ, ಇಲ್ಲಾ ನಿಮಗೆ ನೋವು ಗೊತ್ತಾಗದಿರಲಿ ಎಂದು ನಿಮ್ಮ ಗಮನ ಬೇರೆ ಕಡೆ ಸೆಳೆಯಲು ಹೇಳಿದೆ' ಎಂದರು. ಅಷ್ಟರಲ್ಲಿ ಕುರುವಿನ ಇಲಾಜು ಮುಗಿದು ವೈದ್ಯರು ಆಂಟಿಬಯಾಟಿಕ್ ಕೊಟ್ಟು ಹೋದರು. ರಾತ್ರಿಯೇ ತೇಜಸ್ವಿಗೆ ವಿಪರೀತ ಜ್ವರ, ಪುನಃ ಗೆಳೆಯನಿಗೆ ಜನ್ನಾಪುರಕ್ಕೆ ಕಾಲ್ನಡಿಗೆ ಯಾತ್ರೆ. ಮೂಡಿಗೆರೆಯ ಹತ್ತಿರವಿದ್ದ ತೇಜಸ್ವಿಯವರ ಹತ್ತಿರದ ಅತ್ತೆಯವರಿಗೆ ಫೋನ್ ಮಾಡಿ ಕಾರು ತರಿಸಿಕೊಂಡು ಸ್ನೇಹಿತರಿಬ್ಬರೂ ಮೈಸೂರಿಗೆ ದೌಡಾಯಿಸಿದರು! ಮೈಸೂರು ತಲುಪುತ್ತಿದ್ದಂತೆ ಜ್ವರ ಮಟಮಾಯ!

ಆಗಿನ ದಿನಗಳಲ್ಲಿ ತೋಟಗಳಲ್ಲಿ ಕರೆಂಟ್ ಇರುತ್ತಿರಲಿಲ್ಲ. ಓಡಾಡಲು ಆಟೊ ಇಲ್ಲ. ಸ್ವಂತ ವಾಹನ ಇದ್ದರಿತ್ತು ಇಲ್ಲದಿದ್ದರೆ ಇಲ್ಲ. 'ಚಿತ್ರಕೂಟ'ದಲ್ಲಿ ಮನೆ ಎದುರಿಗೆ ಕಾಫಿತೋಟ. ಮನೆ ಹಿಂದೆ 'ಗಕುಂ' ಎನ್ನುವ ಕಾಡು. ಸೌದೆ ಒಲೆಯಲ್ಲಿ ಅಡುಗೆ, ರಾತ್ರಿ ಸೀಮೆಎಣ್ಣೆ ಲ್ಯಾಂಪ್‌ಗಳ ಬೆಳಕು. ಇಂತಹ ಸನ್ನಿವೇಶದಲ್ಲಿ ತೇಜಸ್ವಿ ಅವರ ಪ್ರಸಿದ್ಧ ಕಾದಂಬರಿ 'ಕರ್ವಾಲೊ' ರೂಪ ತಳೆಯಿತು.

ಈ ಸ್ನೇಹ ಬಳಗದ ಎಲ್ಲ ಕೆಲಸಗಳು ಪತ್ರ ಮುಖೇನವೇ. ನಮ್ಮ ಮದುವೆಯ ನಂತರ ನಾವಿಬ್ಬರು ಬಸ್ಸಿನಲ್ಲಿ ಹೋಗಿ ಜನ್ನಾಪುರದಲ್ಲಿ ಇಳಿದರೆ ತೇಜಸ್ವಿ ತಮ್ಮ ಜೀಪಿನೊಡನೆ ಕಾದಿರುತ್ತಿದ್ದರು. ಎಷ್ಟೋ ಬಾರಿ ನಾವು ಬ್ಯಾಗು ಹಿಡಿದು ಕಾಡಿನ ದಾರಿಯಲ್ಲಿ ಈಚಲು ಹರ ದಾಟಿ ಹೋದರೆ ತೇಜಸ್ವಿ ತೋಟ ಸಿಗುತ್ತಿತ್ತು. ಹೀಗೆ ಪ್ರಥಮ ಬಾರಿಗೆ ನಾನು ಅವರ ತೋಟಕ್ಕೆ ಕಾಲಿಟ್ಟಾಗ ತೇಜಸ್ವಿ ಮನೆಯ ಮುಂದೆ ನಿಂತಿದ್ದ ಜೀಪಿನ ಅಡಿಯಿಂದ ತೆವಳುತ್ತ ಹೊರಬಂದರು! ನಾನು ಅಚ್ಚರಿಯಿಂದ ನೋಡತೊಡಗಿದೆ. ಮುಂದೆ ತಿಳಿಯುತ್ತ ಹೋಯಿತು, ಅವರಿಗೆ ಜೀಪು ಕಾರು ರಿಪೇರಿಯಾಗಲಿ, ಗುನ್ನರ್ ಮಿರಡಲ್‌ನಂತಹ ಚಿಂತಕನ ಗಹನವಾದ ವಿಚಾರಧಾರೆಯನ್ನು ಅರ್ಥ ಮಾಡಿಕೊಳ್ಳುವುದರಲ್ಲಾಗಲಿ ಸಮಾನವಾದ ಶ್ರದ್ಧೆ ಇದೆ ಎನ್ನುವುದು. ಅವರ ಈ ಕುತೂಹಲ ಹುಟ್ಟಿಸುವ ಗಂಭೀರ ಅಧ್ಯಯನಗಳು, ಅನುಭವಗಳು ತಾನು ತಿಳಿದ ವಿಷಯಗಳನ್ನು ತನ್ನ ಜನರಿಗೆ ತಿಳಿಸಬೇಕೆಂಬ ಹಂಬಲವೇ ಮುಂದೆ 'ಪುಸ್ತಕ ಪ್ರಕಾಶನ'ದ ಪ್ರಕಟಣೆಗಳಾಗಿ ಹೊರಬಂದವು.

ತೇಜಸ್ವಿಯವರ 'ಚಿತ್ರಕೂಟ' ತೋಟಕ್ಕೆ ಮೊದಲು ಕಾಲಿಟ್ಟಾಗ ಅವರ ಹಾಸ್ಯ ಪ್ರವೃತ್ತಿಗೆ ಒಳಗಾಗಬೇಕಾಯಿತು. ಒಮ್ಮೆ ನಾವೆಲ್ಲ ಕುಳಿತಿದ್ದಾಗ ಅವರ ನಾಯಿ ಕಿವಿಯನ್ನು ನನ್ನ ಮೇಲೆ 'ಛೂ' ಬಿಟ್ಟರು. ಹಾರಿ ಬಂದ ಕಿವಿ ನಾನು ಕುಳಿತಿದ್ದ ಕುರ್ಚಿಯ ಎರಡೂ ಕಡೆ ಕಾಲು ಹಾಕಿ ನನ್ನನ್ನೇ ದಿಟ್ಟಿಸುತ್ತ ನಿಂತಿತು. ಹೆದರಿ ಅಪ್ಪಳಿಸಿ ಹೋಗಿದ್ದರೂ ಯಾವ ಪ್ರತಿಕ್ರಿಯೆಯನ್ನು ತೋರಿಸದೆ ಕುಳಿತಿದ್ದ ನನ್ನನ್ನು ನೋಡಿ ತೇಜಸ್ವಿ, 'ಪರವಾಗಿಲ್ಲ ಕಣ್ರೀ ನೀವು' ಎಂದು ನಗುತ್ತ ಕಿವಿಯನ್ನು ಹಿಂದಕ್ಕೆ ಕರೆದರು. ಕ್ರಮೇಣ ಕಿವಿ ಮತ್ತು ನಾನು ಹೊಂದಿಕೊಂಡೆವು. ತೋಟ ನೋಡಲು ಹೋದೆವು. ತೋಟದಲ್ಲಿದ್ದ ಕೆರೆಗೆ ಅಡ್ಡಲಾಗಿ ಒಂದು ದೊಡ್ಡ ಮರದ ದಿಮ್ಮಿ ಇತ್ತು. ತೇಜಸ್ವಿ ಅದರ ಮೇಲೆ ಸರಾಗವಾಗಿ ನಡೆದುಕೊಂಡು ಹೋಗಿ, 'ನೀವೂ ಬನ್ನಿ ನೋಡೋಣ' ಎಂದು ಸವಾಲ್ ಹಾಕಿದರು. ಕೆರೆ ನೀರಿನ ಮೇಲಿರುವ ದಿಮ್ಮಿಯ ಮೇಲೆ ಬ್ಯಾಲೆನ್ಸ್ ಮಾಡುತ್ತ ನಡೆಯಲು ಭಯ! ನಿರಾಕರಿಸಿದೆ. 'ಇದೇನ್